# ತರಳೆ ರನ್ನೆ ಕಪ್ಪು ಮೈಯವ ಏತರ ಚೆಲುವನೇ

**(ಪಾರ್ವತಿ ಮತ್ತು ಲಕ್ಷ್ಮೀ ದೇವಿಯರ ಸಂವಾದ)**

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 261.
2. **Note:** This song is not available in other standard books.
3. **Note:** Singer has followed these lyrics, but are slightly different.

ರಾಗ: ಆನಂದ ಭೈರವಿ ತಾಳ: ಅಟ

ತರಳೆ ರನ್ನೆ ಕಪ್ಪು ಮೈಯವ ಏತರ ಚೆಲುವನೇ?
ಕರಿಯ ಜಡೆಯ ಜೋಗಿಗಿಂತ ಉತ್ತಮನೆನೇ? || ಪ ||

ಜಲಧಿಯೊಳು ವಾಸವೇನು ಮನೆಗಳಿಲ್ಲವೇ?
ಲಲನೆ ಕೇಳು ಕಾಡಿಗಿಂತ ಲೇಸು ಅಲ್ಲವೇ? || ೧ ||

ಮಂದರಗಿರಿಯ ಪೊತ್ತದು ಏನು ಚೆಂದವೇ?
ಕಂದನೊಯ್ದು ಅಡವಿಯೊಳಿಡುವುದಾವ ನ್ಯಾಯವೇ || ೨ ||

ಮಣ್ಣನಗೆದು ಬೇರ ಮೆಲುವುದೇನು ಸ್ವಾದವೇ?
ತನ್ನ ಕರದಿ ಕಪಾಲ ಪಿಡಿವುದಾವ ನ್ಯಾಯವೇ? || ೩ ||

ಮುತ್ತಿನ ಹಾರವಿರಲು ಕರುಳ ಮಾಲೆ ಚಂದವೇ?
ನಿತ್ಯ ರುಂಡ ಮಾಲೆ ಧರಿಸೋದದು ನ್ಯಾಯವೇ? || ೪ ||

ಗಿಡ್ಡನಾಗಿ ಬೆಳೆದು ಅಳೆವುದೇನು ನ್ಯಾಯವೇ?
ಗುಡ್ಡದ ಮಗಳ ತಂದೆಗೆ ಮುನಿವೋದು ನ್ಯಾಯವೇ? || ೫ ||

ಪಿತನ ಮಾತ ಕೇಳಿ ಮಾತೆಯ ಶಿರವನಳಿವರೇ?
ಶಿತಿಕಂಠನಾಗಿ ಇರುವುದದಾವ ನ್ಯಾಯವೇ? || ೬ ||

ಕೋಡಗ ಕರಡಿ ಕಪಿಗಳ ಹಿಂಡು ಬಂಧು ಬಳಗವೇ?
ಕೂಡಿ ಬಂದ ಭೂತ ಬಳಗ ಜ್ಞಾತಿ ಸಂಬಂಧವೇ? || ೭ ||

ಹಾವಿನ ಹೆಡೆಯ ತುಳಿವರೇನೇ ಅಂಜಿಕಿಲ್ಲವೇ?
ಹಾವು ಮೈಗೆ ಮುತ್ತಿರಲು ಹೇಗೆ ಜೀವಿಪನೇ? || ೮ ||

ಬತ್ತಲಿರುವರೇನು ಅವಗೆ ನಾಚಿಕಿಲ್ಲವೇ?
ಸತ್ತ ಗಜದ ಚರ್ಮ ಹೊದೆಯಲು ಹೇಸಿಕಿಲ್ಲವೇ? || ೯ ||

ಉತ್ತಮ ತೇಜಿಯಿರಲು ಧರೆಯೊಳು ಹದ್ದನೇರ್ವರೇ?
ಎತ್ತಿನ ಬೆನ್ನನೇರಿದವರು ಬುದ್ಧಿವಂತರೇ? || ೧೦ ||

ಹರಿಹರರಿಗೆ ಸಾಮ್ಯವೇನೇ ಪೇಳೇ ರುಕ್ಮಿಣಿ
ಪುರಂದರ ವಿಠಲ ಸರ್ವೋತ್ತಮ ಕೇಳೇ ಭವಾನಿ || ೧೧ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಜಲಧಿಯೊಳು ವಾಸವೇನು .......** = ಮತ್ಸ್ಯಾವತಾರ

**ಮಂದರಗಿರಿಯ ಪೊತ್ತದು ......** = ಕೂರ್ಮಾವತಾರ

**ಮಣ್ಣನಗೆದು ಬೇರ ಮೆಲುವುದೇನು ......** = ವರಾಹಾವತಾರ

**ಮುತ್ತಿನ ಹಾರವಿರಲು ಕರುಳ ಮಾಲೆ ......** = ನರಸಿಂಹಾವತಾರ

**ಗಿಡ್ಡನಾಗಿ ಬೆಳೆದು ಅಳೆವುದೇನು .......** = ವಾಮನವತಾರ

**ಪಿತನ ಮಾತ ಕೇಳಿ ಮಾತೆಯ .......** = ಪರಶುರಾಮಾವತಾರ

**ಕೋಡಗ ಕರಡಿ ಕಪಿಗಳ ಹಿಂಡು .....** = ರಾಮಾವತಾರ

**ಹಾವಿನ ಹೆಡೆಯ ತುಳಿವರೇನೇ ......** = ಕೃಷ್ಣಾವತಾರ

**ಬತ್ತಲಿರುವರೇನು ಅವಗೆ ......** = ಬೌದ್ಧಾವತಾರ

**ಉತ್ತಮ ತೇಜಿಯಿರಲು ಧರೆಯೊಳು .......** = ಕಲ್ಕ್ಯಾವತಾರ

**Classification:** Keerthane
**Ankita:** purandara vittala
**Location:** NA
**Category:** Dashavatara
**Sub-Category:** dashavatara, kappu, shiva, Parvati, Vishnu, bhumi, mane, yogi, kaadu, Samudra, parvata, kai, sittu, tande, tayi, karadi, koti, bandhu, uraga, nachike, kudure, Krishna, Rukmini, hari sarvottama,
**Pravachana:** NA
**Explanation:** NA